ಎಂ ವಿ ಸಿ ನಂಃ 572/2022
ಆರ್. ಡಬ್ಲ್ಯೂ-2

**(ಇಂದು ದಿನಾಂಕ 10-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಎದುರುದಾರರ ಪರ ಶ್ರೀ ಎಸ್ ಎನ್ ಬಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| ಕ್ರ.ಸಂ. | ದಾಖಲೆಗಳ ನಮೂನೆ | ನಿಶಾನೆ |
|---|---|---|
| 1 | ವಿಮಾ ಪತ್ರದ ದೃಡಿಕೃತ ಪ್ರತಿ | ನಿಡಿ-3 |

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಹೆಚ್ ಹೆಚ್ ಸಿ ವಕೀಲರಿಂದ**

1. ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರ ತಯಾರಿಸಲು ದಾಖಲೆಗಳ ಅಡಿಯಲ್ಲಿ ನಾನೇ ಮಾಹಿತಿ ಕೊಟ್ಟಿದ್ದೇನೆ. ಅಪಘಾತದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 2 ನೇ ಎದುರುದಾರರ ಸಂಸ್ಥೆಯ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ನೀಡಲಾಗಿದೆ ಎಂದು ತೋರಿಸುವ ಅಧಿಕಾರ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಖುದ್ದಾಗಿ ಅಪಘಾತಕ್ಕೆ ಕಾರಣವಾಗಿದೆ ಎಂದು ಹೇಳುವ ವಾಹನ ಚಾಲಕನ ಚಾಲನಾ ಪರವಾನಿಗೆಯನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಆರ್ ಟಿ ಓ ಮೂಲಕ ಪರಿಶೀಲನೆ ಮಾಡಿದ್ದೆವೆ ಎನ್ನುತ್ತಾರೆ. ಅಪಘಾತಕ್ಕೆ ಕಾರಣವಾಗಿದೆ ಎಂದು ಹೇಳುವ ವಾಹನ ಚಾಲಕನ ಚಾಲನಾ ಪರವಾನಿಗೆಯನ್ನು ನಾನು ಪರಿಶೀಲನೆ ಮಾಡಿದ್ದೇನೆ. ನಿಡಿ.2 ರ ಪ್ರಕಾರ ಅಪಘಾತಕ್ಕೆ ಕಾರಣವಾಗಿದೆ ಎಂದು ವಾಹನ ಚಾಲಕನ ಚಾಲನಾ ಪರವಾನಿಗೆ 4 ರೀತಿಯ ವಾಹನಗಳನ್ನು

ಚಲಾಯಿಸಲು ನೀಡಲಾಗಿದೆ ಎಂದರೆ ಸರಿ. ಸಾಕ್ಷಿಯು ಅದು ಅವಧಿ ಮೀರಿದೆ ಎಂದು ಹೇಳುತ್ತಾರೆ. ಅಪಘಾತಕ್ಕೆ ಕಾರಣವಾಗಿದೆ ಎಂದು ಹೇಳುವ ವಾಹನ ಅದು ಲಘು ಸರಕು ಸಾಗಾಣೆ ವಾಹನ ಎಂದರೆ ಸರಿ. ನಿಡಿ.2 ರ ಅಡಿಯಲ್ಲಿ ಅಪಘಾತಕ್ಕೆ ಕಾರಣವಾಗಿದೆ ಎಂದು ಹೇಳುವ ವಾಹನ ಚಾಲಕನು ಅದು ಲಘು ಸಾರಿಗೆ ವಾಹನ ಚಲಾಯಿಸಲು ಸಕ್ಷಮ ಆಗಿದ್ದಾನೆ ಎಂದರೆ ಸಾಕ್ಷಿಯು ಅವನ ಪರವಾನಿಗೆ ಮೀರಿರುವುದರಿಂದ ಈ ಕುರಿತು ನನಗೆ ಏನು ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಈ ಮಾಹಿತಿ ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಕಾರಣವಾಗಿದೆ ಎಂದು ಹೇಳುವ ವಾಹನ ಚಾಲಕನು ಪ್ರಚಲಿತ ಕಾಯ್ದೆ ಗಳನ್ನು ಉಲ್ಲಂಘನೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಅಪಘಾತಕ್ಕೆ ಕಾರಣವಾದ ವಾಹನಕ್ಕೆ ವಿಮೆ ಇದ್ದು ಮತ್ತು ಅದರ ಚಾಲಕನ ಚಾಲನಾ ಪರವಾನಿಗೆ ಚಾಲ್ತಿಯಲ್ಲಿದ್ದ ಕಾರಣ ನಮ್ಮ ಸಂಸ್ಥೆ ಪರಿಹಾರ ಪಾವತಿಸಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ನಾನು ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.